# ಫೈಪಿಂಗ್ ಫುಟ್




ಈ ಟ್ಯುಟೋರಿಯಲ್ನಲ್ಲಿ ನೀವು ಉಷಾ ಜಾನೊಮ್ ಪೈಪಿಂಗ್ ಫುಟ್ನ್ನು ಬಳಸುವುದು ಹೇಗೆ ಮತ್ತು ಈ ಫುಟ್ ಬಳಸಿ ಹೊಲಿಗೆ ಸಾಲಿಗೆ ಹಗ್ಗವನ್ನು ಹಾಕುವುದು ಹೇಗೆ ಎಂಬುದನ್ನು ತಿಳಿಯುತ್ತೀರಿ.




ಪೈಪಿಂಗ್ ಸ್ಟೈಲ್ ಅಂಚುಗಳಿಗೆ ನೆರವಾಗುತ್ತದೆ ಮತ್ತು ಅದಕ್ಕೆ ಬಲ ತುಂಬುವಾಗ ಅವುಗಳನ್ನು ಮುಖ್ಯವಾಗಿ ಮಾಡುತ್ತವೆ. ಸಾಮಾನ್ಯವಾಗಿ ಇವುಗಳನ್ನು ಉಡುಪುಗಳು ಹಾಗೂ ಮನೆಬಟ್ಟೆಗಳು ಮತ್ತು ವಿಭಿನ್ನ ಶೈಲಿಯ ಹೊಲಿಗೆ ಕೆಲಸಗಳಲ್ಲಿ ಕ್ರಿಯಾಶೀಲವಾಗಿ ಬಳಸಿಕೊಳ್ಳಬಹುದು.

ಈ ಟ್ಯುಟೋರಿಯಲ್ಗೆ ನಿಮಗೆ ಬೇಕಾಗಿರುವುದೆಂದರೆ: ಉಷಾ ಜಾನೊಮ್ ಪೈಪಿಂಗ್ ಫುಟ್, ಒಂದು 10*2 ಇಂಚಿನ ಬಟ್ಟೆಯ ದಾರ, ಒಂದು 10*10 ಇಂಚಿನ ಬಟ್ಟೆಯ ಚೌಕಾಕಾರದ ತುಂಡು, ಇಲ್ಲಿ ತೋರಿಸಿರುವಂತೆ ಸ್ವಲ್ಪ ಹಗ್ಗ, ನೂಲು ಮತ್ತು ಒಂದು ಜೊತೆ ಕತ್ತರಿ.

ಇಲ್ಲಿ ಇದು ಪೈಪಿಂಗ್ ಫುಟ್- ಜಾಗರೂಕತೆಯಿಂದ ಗಮನಿಸಿ ಮತ್ತು ನೀವೇ ಗಮನಿಸುತ್ತೀರಿ ಇದರಲ್ಲಿ ಒಳಭಾಗದಲ್ಲಿ ಎರಡು ಚಡಿಗಳಿವೆ.- ಇವು ಪೈಪಿಂಗ್ ಮಾಡುವಾಗ ದಾರವನ್ನು ಹಿಡಿದುಕೊಳ್ಳುತ್ತವೆ ಮತ್ತು ಮುಚ್ಚುತ್ತವೆ. ಸರಿಯಾದ ಪೈಪಿಂಗ್ ಪಡೆಯುವುದು ಹೇಗೆ ಎಂದು ತಿಳಿಯಲು ಈ ಸೂಚನೆಗಳನ್ನು ಪಾಲಿಸಿ...ಸಾಮಾನ್ಯವಾದ ಪ್ರೆಸ್ಸರ್ ಫುಟ್ನ್ನು ತೆಗೆಯಿರಿ ಮತ್ತು ತ್ವರಿತವಾಗಿ ಪೈಪಿಂಗ್ ಫುಟ್ಗೆ ಜಾರಿಕೊಳ್ಳಿ.

ಈಗ ಬಟ್ಟೆಯ ದಾರವನ್ನು ತೆಗೆದುಕೊಳ್ಳಿ ಹಗ್ಗವನ್ನು ಬಟ್ಟೆಯ ದಾರದ ಮಧ್ಯದಲ್ಲಿ ಇಡಿ, ಮತ್ತು ಉದ್ದನೆಯ ಹಗ್ಗವನ್ನು ಕತ್ತರಿಸಿಕೊಳ್ಳಿ. ದಾರವನ್ನು ಹಗ್ಗದ ಮೇಲೆ ಎರಡೂ ತುದಿಗಳು ಸೇರುವಂತೆ ಮಡಿಚಿಕೊಳ್ಳಿ. ನಾನು ಮಾಡುವಂತೆ ಇದನ್ನು ಗಟ್ಟಿಯಾಗಿ ಹಿಡಿದುಕೊಳ್ಳಿ ಮತ್ತು ಮಡಿಚಿದ ಬಟ್ಟೆಯನ್ನು ಹಗ್ಗದ ಜೊತೆಗೆ ಪೈಪಿಂಗ್ ಫುಟ್ ಕೆಳಗೆ ಹಿಡಿದುಕೊಳ್ಳಿ.





ನಿಮ್ಮ ಯಂತ್ರವನ್ನು ನೇರವಾದ ಹೊಲಿಗೆಗೆ ಸಿದ್ಧವಾಗಿಟ್ಟುಕೊಳ್ಳಿ. ನಂತರ ಹೊಲಿಗೆಯ ಉದ್ದವನ್ನು 2 ಮತ್ತು 3 ರ ನಡುವೆ ಇಟ್ಟುಕೊಳ್ಳಿ, ಹೊಲಿಗೆಯ ಅಗಲವನ್ನು 4 ಮತ್ತು 5 ರ ಮಧ್ಯಕ್ಕೆ ಹೆಚ್ಚಿಸಿಕೊಳ್ಳಿ.





ಸ್ಟಾರ್ಟ್ ಒತ್ತಿ ಮತ್ತು ಹೊಲಿಗೆಯನ್ನು ಆರಂಭಿಸಿ. ಹಗ್ಗವನ್ನು ಜಾಗರೂಕವಾಗಿಡಲು ನೀವು ಬಟ್ಟೆಗೆ ಪಿನ್ ಅಳವಡಿಸಿ ಕೂಡ ಹೊಲಿಯಬಹುದು. ಸಾಧ್ಯವಾಗುವಷ್ಟು, ಆದರೆ ಆರಾಮವಾಗುವ ಹಂತದವರೆಗೆ, ನಿಧಾನವಾಗಿ ಯಂತ್ರದ ವೇಗವನ್ನು ಹೆಚ್ಚಿಸಿ.



ನಿಮ್ಮ ಪೈಪಿಂಗ್ ಸಿದ್ಧವಾಗಿದೆ. ಅನಗತ್ಯ ಅಂಚುಗಳಿದ್ದರೆ ಕತ್ತರಿಸಿಕೊಳ್ಳಬಹುದು- ಇರಬಹುದಾದ ಹಗ್ಗ ಮತ್ತು ನೂಲು. ಈಗ ದೊಡ್ಡ ಬಟ್ಟೆಯ ತುಂಡನ್ನು ತೆಗೆದುಕೊಳ್ಳಿ ಮತ್ತು ಪೈಪಿಂಗನ್ನು ಬಟ್ಟೆಯ ಬಲಬದಿಯ ಅಂಚಿನುದ್ದಕ್ಕೂ ಇರುವಂತೆ ಈ ರೀತಿ ಜೋಡಿಸಿಕೊಳ್ಳಿ.




ಎಡಭಾಗದಲ್ಲಿ ನೀವು ಪೈಪಿಂಗನ್ನು ಬಟ್ಟೆಯ ಜೊತೆಗೆ ಹೊಲಿಯುವಾಗ ಹಗ್ಗವಿರುವ ಪೈಪಿಂಗ್ ಸುಲಭವಾಗಿ ತೂರಬಹುದಾದ ದೊಡ್ಡ ಚಡಿಯನ್ನು ಬಳಸಿಕೊಳ್ಳಿ. ಪೈಪಿಂಗ್ ಮೇಲೆ ಹೊಲಿದ ಲೈನ್ನ ಉದ್ದಕ್ಕೂ ಸರಿಹೊಂದುವಂತೆ ಸೂಜಿಯನ್ನು ಎಡಕ್ಕೆ ಜೋಡಿಸಿಕೊಳ್ಳಿ.
ಈಗ ಹೊಲಿಗೆಯ ಅಗಲವನ್ನು 2.5 ಕ್ಕೆ ಇಳಿಸಿಕೊಳ್ಳಿ ಮತ್ತು ಹೊಲಿಗೆ ಆರಂಭಿಸಿ.



ನಂತರ ನಾನು ಮಾಡುತ್ತಿರುವಂತೆ, ಅಂಚಿನುದ್ದಕ್ಕೂ ಹೊಲಿದು ಉತ್ತಮ ಅಂತ್ಯ ನೀಡುವಂತೆ ಪೈಪಿಂಗನ್ನು ಬಟ್ಟೆಯ ಕೆಳಗೆ ಮಡಿಸಿಕೊಳ್ಳಿ. ಹೊಲಿಗೆಯ ಅಗಲವನ್ನು 4 ಕ್ಕೆ ಏರಿಸಿಕೊಳ್ಳಿ ಮತ್ತು ಹೊಲಿಯಿರಿ.
ಇದು ನಿಮ್ಮ ಫಿನಿಶಿಂಗ್ಗೆ ಉತ್ತಮ ಕೈಚಳಕವನ್ನು ಸೇರಿಸುತ್ತದೆ.



ನೀವು ಪೈಪಿಂಗನ್ನು ವಿವಿಧ ಹೊಲಿಗೆ ಕೆಲಸಗಳಲ್ಲಿ ಆಲಂಕಾರಿಕ ಅಲಂಕರಣವಾಗಿ ಬಳಸಬಹುದು ಮತ್ತು ಹೆಮ್ ಲೈನ್ಗಳು ಮತ್ತು ಕಂಠಹಾರಗಳನ್ನು ಹೆಚ್ಚಿಸಲು ಮತ್ತು ಯಾವುದೇ ಉಡುಪಿನ ಅಂಚಿಗೆ, ನಿಮಗೆ ನಿಮ್ಮ ಹೊರ ಉಡುಪಿನ ಅಂದವನ್ನು ಹೆಚ್ಚಿಸುತ್ತದೆ ಎನಿಸಿದರೆ ಬಳಸಬಹುದು. ಪೈಪಿಂಗ್ ಬಳಕೆಯಿಂದ ಆ ಹೆಚ್ಚುವರಿ ಅಂಚನ್ನು ಸೇರಿಸಿ ಮೋಜು ಅನುಭವಿಸಿ. ...ನಿಮ್ಮ ಮನೆಯುಡುಗೆಗಳು, ಕಲಾ ಪ್ರಾಕಾರಗಳು, ಹೊದಿಕೆ ಮೊದಲಾದವುಗಳು. ಹಾಗಾಗಿ ಮುಂದೆ ಸಾಗಿ ಮತ್ತು ಪೈಪಿಂಗ್ ಮೂಲಕ ಒಂದು ಹೊಚ್ಚಹೊಸ ಅಂತ್ಯ ಪಡೆಯಲು ಅಭ್ಯಾಸ ನಡೆಸುವ ಸಂತಸ ಅನುಭವಿಸಿ!